| Form No.4 (Civil) Deposition Sheets (R.P.No.57) |
| --- |

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 110/2020

ಪ್ರಾ.ಸಾ. 3 ಚಾ.ಸಾ. 5

| | | |
| --- | --- | --- |
| ಹೆಸರು | : | ಶ್ರೀಮಂತ ಸಿಂಗ |
| ತಂದೆಯ ಹೆಸರು | : | ಭೀಮಶಾಸಿಂಗ |
| ವಯಸ್ಸು | : | 49 ವರ್ಷ |
| ಉದ್ಯೋಗ | : | ಎಎಸಐ ವಡಗೇರಾ ಪೊಲೀಸಠಾಣೆ |
| ವಾಸ | : | ವಡಗೇರಾ |

**ಪ್ರಮಾಣ ವಚನ ಭೋಧಿಸಿದ ದಿನಾಂಕಃ 21-04-2025**
**ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ**

ನಾನು 2016 ರಿಂದ 2021ರ ವರೆಗೆ ನಾನು ಡಿ.ಸಿ.ಆರ್.ಬಿ.ಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನನಗೆ ಚಾಸಾ-1 ರಿಂದ 4, 6 ರಿಂದ 18 ರವರ ಪರಿಚಯ ಇರುತ್ತದೆ. ಆರೋಪಿಯ ಪರಿಚಯ ಇದೆ. ದಿಃ 24.09.2020 ರಂದು ಬೆಳಿಗ್ಗೆ 10-00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ನನ್ನ ಜೊತೆ ಸಿಪಿಐ ಸಿ.ಇ.ಎನ್. ಯಾದಗಿರಿ ಅವರು ಮತ್ತು ಅವರ ಸಿಬ್ಬಂದಿಯವರು ಠಾಣೆಯಲ್ಲಿದ್ದಾಗ ಚಾಸಾ-1 ರವರಿಗೆ ಒಂದು ಮಾಹಿತಿ ಬಂದಿದ್ದು ಮುದ್ನೂರ (ಬಿ) ಗ್ರಾಮದಲ್ಲಿ ಶಂಕರಸಿಂಗ ಅವರ ಹೊಲದಲ್ಲಿ ಅನಧಿಕೃತವಾಗಿ ಗಾಂಜಾ ಬೆಳೆದಿದ್ದಾರೆ ಎಂದು ಮಾಹಿತಿ ಬಂದಿದ್ದು ಅದರಂತೆ ತಹಶೀಲ್ದಾರ ಹುಣಸಗಿ ಅವರಿಗೆ ಫೋನ್ ಮುಖಾಂತರ ಮಾಹಿತಿ ತಿಳಿಸಿ ದಾಳಿ ಮಾಡಲು ಠಾಣೆಗೆ ಬರುವಂತೆ ತಿಳಿಸಿರುತ್ತಾರೆ. ಹಾಗೆ ದಾಳಿ ಕಾಲಕ್ಕೆ ಪಂಚರು ಬೆಕೆಂದು ಮುದ್ನೂರ ಸರಕಾರಿ ಪ್ರೌಢ ಶಾಲೆಯ ಶಿಕ್ಷಕರಾದ ಗುರು ತಂದೆ ಸಂಗಪ್ಪ ಮತ್ತು ಅಬ್ದುಲ ಖಯುಮ ಅವರನ್ನು ಠಾಣೆಗೆ ಬರುವಂತೆ ನಮ್ಮ ಸಿಬ್ಬಂದಿಯವರಿಗೆ ಹೇಳಿ ಕಳುಹಿಸಿರುತ್ತಾರೆ. ಗಾಂಜಾ ತೂಕಮಾಡಲುವ ಒಬ್ಬ ವ್ಯಕ್ತಿಯನ್ನು ವಡಗೇರಾ ತುಕ ಯಂತ್ರ ಮಾಡುವವನ್ನು ಕರೆಸಿಕೊಂಡೆ ಫೋಟೊಗಳನ್ನು ತೆಗೆಯಲು ವಿಶ್ವನಾಥ ಫೋಟೊ ಗ್ರಾಫರ ಇವರನ್ನು ಕರೆಸಿಕೊಂಡರು. ಹೊಲ ಗುರುತಿಸಲು ಗ್ರಾಮ ಲೆಖಾಧಿಕಾರಿ ಶಿಲಾ ಹೂಗಾರ ಅವರನ್ನು ಕರೆಯಿಸಿದೆ. ಡಿವೈಎಸಪಿ ಸುರಪೂರ ಅವರ ಅನುಮತಿ ಪಡೆದು ಬೆಳಿಗ್ಗೆ 11-30 ಗಂಟೆಗೆ ಠಾಣೆಯನ್ನು ಬಿಟ್ಟು ನಮ್ಮ ಇಲಾಖಾ ಜೀಪನಲ್ಲಿ ನಾನು ಮತ್ತು ಸಿಬ್ಬಂದಿಯವರು ಹಾಗೂ

ತಹಶೀಲ್ದಾರ ಅವರ ಇಲಾಖಾ ಜೀಪನಲ್ಲಿ ತಹಶೀಲ್ದಾರ ಮತ್ತು ಉಭಯ ಪಂಚರು, ತೂಕ ಮಾಡುವವರು, ಫೋಟೊ ಗ್ರಾಫರ ಮತ್ತು ಗ್ರಾಮಲೆಖಾಧಿಕಾರಿಗಳು, ಮತ್ತು ಸಿ.ಇ.ಎನ್. ಇನ್ಸಪೇಕ್ಟರ ಮತ್ತು ಅವರ ಸಿಬ್ಬಂದಿಗಳು ಎಲ್ಲರೂ ಹೊರಟು ಮುದ್ನೂರ ಗ್ರಾಮಕ್ಕೆ ಮಧ್ಯಾಹ್ನ 12-30 ಗಂಟೆಗೆ ಮುದ್ನೂರ ಗ್ರಾಮದ ಸರ್ವೆ ನಂ. 176 ಕ್ಕೆ ತಲುಪಿದೇವು. ನಮ್ಮನ್ನು ನೋಡಿ ಒಬ್ಬ ವ್ಯಕ್ತಿ ಓಡಿ ಹೋದ ನಾವು ಎಲ್ಲರೂ ಸೇರಿ ಆ ಹೊಲಕ್ಕೆ ಹೋಗಿ ಪರಿಶೀಲಿಸಿದಾಗ ಹತ್ತಿ ಹೊಲದಲ್ಲಿ ಅಲ್ಲಲ್ಲಿ ಕಾಣದ ಹಾಗೆ ಅನಧಿಕೃತವಾಗಿ ಗಾಂಜಾ ಗಿಡಗಳನ್ನು ಬೆಳೆದಿದ್ದು ಕಂಡು ಬಂತು. ಉಭಯ ಪಂಚರ ಸಮಕ್ಷಮ ಸಿಬ್ಬಂದಿಗಳ ಸಹಾಯದಿಂದ 3 ವರೆ ಅಡಿ ಇರುವ ಒಟ್ಟು 20 ಗಿಡಗಳು, ಮತ್ತು 2 ಅಡಿಯ 70 ಗಿಡಗಳನ್ನು ಕಿತ್ತಿ ಪರಿಶೀಲಿಸಿ ನೋಡಲಾಗಿ 20 ಗಿಡಗಳಲ್ಲಿ ಹೂ ಮತ್ತು ಕಾಯಿ ಇತ್ತು. ಪಂಪರಿಗೆ ಇದ್ದನ್ನು ತಿಳಿಸಿದ್ದೇನೆ. ಆ ಗಿಡಗಳನ್ನು ತೂಕಮಾಡಲು ಬಂದಿದ್ದ ಮಕ್ತುಮ ಅವರ ಸಹಾಯದಿಂದ ಅಲ್ಲೆ ತೂಕ ಮಾಡಿಸಿರುತ್ತೇನೆ. ಒಟ್ಟು 22 ಕೆ.ಜಿ. 400 ಗ್ರಾಮ ಇತ್ತು. ತೂಕ ಮಾಡುವ ಕಾಲಕ್ಕೆ ಫೋಟೊಗಳನ್ನು ತೆಗೆಸಿ ವಿಡಿಯೋ ಮಾಡಿಸಿರುತ್ತೇನೆ. 20 ಗಿಡಗಳನ್ನು ತಲಾ 5 ರಂತೆ 4 ಪೆಂಡಿಗಳನ್ನು ಮಾಡಿಸಿ, ಒಟ್ಟು 5 ಪೆಂಡಿಗಳನ್ನು ಮಾಡಿ ಒಂದೊಂದು ಪೆಂಡಿಯಿಂದ ಆರ್.ಎಫ್.ಎಸ್.ಎಲ್. ಸಲುವಾಗಿ 100 ಗ್ರಾಮನ್ನು ಹೂ ಕಾಯಿ ಇರುವಂತೆ ತೆಗೆದು ಸ್ಯಾಮಪಲ ಸಲುವಾಗಿ ಬಿಳಿ ಚೀಲದಲ್ಲಿ ಹಾಕಿ ಅರಗಿನಿಂದ ಸೀಲ್ ಮಾಡಿ ಪಂಚರ ಸಹಿ ಇರುವ ಚೀಟಿ ಅದಕ್ಕೆ ಅಂಟಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1-30 ರಿಂದ 3-30 ಗಂಟೆಯ ವರೆಗೆ ಮಾಡಿರುತ್ತೇನೆ. ನಂತರ ಮುದ್ದೆ ಮಾಲುಗಳನ್ನು ಮತ್ತು ಜಪ್ತಿ ಪಂಚನಾಮೆ ತೆಗೆದುಕೊಂಡು ಠಾಣೆಗೆ ಹೋಗಿ ಸಂಜೆ 4-00 ಗಂಟೆಗೆ ಠಾಣಾಧಿಕಾರಿಯವರಿಗೆ ಚಾಸಾ-1 ರವರು ವರದಿ ಜೊತೆಗೆ ಮುದ್ದೆ ಮಾಲುಗಳನ್ನು ಮತ್ತು ಜಪ್ತಿ ಪಂಚನಾಮೆ ಕೊಟ್ಟಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಸೀಲ್ ಮಾಡಿದ್ದ ಬಿಳಿ ಬಟ್ಟೆಯಲ್ಲಿ ಸುತ್ತಿದ್ದ ಮುದ್ದೆ ಮಾಲನ್ನು ತೆಗೆದು ತೋರಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿಯವರಿಗೆ ಹೇಳಿಕೆ ಕೊಟ್ಟಿರುತ್ತೇನೆ.

<u>ಪಾಟೀ ಸವಾಲು ಆರೋಪಿಯ ಪರವಾಗಿ ಶ್ರೀ. ಕೆ.ಟಿ. ವಕೀಲರಿಂದ</u>

3. ನಮ್ಮ ಕಛೇರಿ ಯಾದಗಿರಿಯಲ್ಲಿ ಎಸ್.ಪಿ. ಅವರ ಕಛೇರಿಯಲ್ಲಿ ಇದೆ. ನಾವು ಸಾಮಾನ್ಯವಾಗಿ ಠಾಣೆಗಳಿಗೆ ಬೇಟಿ ನೀಡುವಂತೆ ಆ ದಿನ ಹೋಗಿದ್ದೆವು. ನಮಗೆ ಯಾವುದೇ ಮಾಹಿತಿ ಮೊದಲು ಬಂದಿರಲಿಲ್ಲ. ಕೆಂಭಾವಿ ಠಾಣೆಗೆ ಹೋಗಲು ಭೀ-ಗುಡಿ, ಗೋಗಿ, ಮಲ್ಲಾ, ಮಾರ್ಗವಾಗಿ ಹೋಗಿರುತ್ತೇವೆ. ನಾವು ಶಹಾಪೂರ, ಭೀ-ಗುಡಿ, ಗೋಗಿ ಪೊಲೀಸಠಾಣೆಯ ಹತ್ತಿರದ ಮಾರ್ಗವಾಗಿ ಹೋಗಿದ್ದೇವು. ನಾವು ಆ ಠಾಣೆಗಳಿಗೆ ಬೇಟಿ ಕೊಟ್ಟಿಲ್ಲ. ನಾವು ಬೆಳಿಗ್ಗೆ 8-00 ಗಂಟೆಗೆ ಯಾದಗಿರಿ ಬಿಟ್ಟೆವು. ಪಿಎಸಐ ಅವರಿಗೆ ಮಾಹಿತಿ ಬಂದಿದ್ದು ಅವರು ನಮಗೆ

ತಿಳಿಸಿದರು. ನನಗೆ ಖುದ್ದು ಮಾಹಿತಿ ಇರುವುದಿಲ್ಲ. 11-20 ಗಂಟೆ ವರೆಗೆ ಪಂಚರು, ತಹಶೀಲ್ದಾರ ಮತ್ತು ತುಕ ಮಾಡುವವರು ಠಾಣೆಗೆ ಬಂದಿದ್ದರು. ದಾಳಿಗೆ ಹೋಗುವ ವಿಷಯವನ್ನು ಪಿಎಸಐ ಅವರು ಯಾರು ಯಾರು ಬಂದರೋ ಅವರಿಗೆ ಪ್ರತ್ಯೇಕವಾಗಿ ತಿಳಿಸಿದರು. ಇಷ್ಟು ವಿಷಯವನ್ನು ಒಬ್ಬೊಬ್ಬರಿಗೆ ಹೇಳಬೇಕು ಎಂದರೆ 5-10 ನಿಮಿಷ ಬೇಕಾಗುತ್ತದೆ ಎಂದರೆ ಪಿಎಸಐ ಅವರು ಅವರುಗಳಿಗೆ ಹೇಳಿರುತ್ತಾರೆ. ನಮಗೆ ಸಿಪಿಐ ಅವರು ಮಾಹಿತಿ ಕೊಟ್ಟರು. ಪಿಎಸಐ ಸುದರ್ಶನರೆಡ್ಡಿ ಅವರು ನಮಗೆ ಮಾಹಿತಿ ತಿಳಿಸಿಲ್ಲ. ಸಿಪಿಐ ಅವರು ಹೇಳಿದರು. ಕೆಂಭಾವಿಯಿಂದ ಹೊಲದ ರಸ್ತೆಯಲ್ಲಿ ನೇರವಾಗಿ ದಾಳಿಗೆ ಹೋದೆವು. ಜೀಪನ್ನು ಹೊಲದಿಂದ 1 ಕಿ.ಮೀ. ದೂರದಲ್ಲಿ ನಿಲ್ಲಿಸಿದ್ದೆವು. ನಾವು ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿ ಓಡಿ ಹೋದ. ಯಾವುದೇ ವ್ಯಕ್ತಿ 1 ಕಿ.ಮೀ. ದೂರದಲ್ಲಿ ಓಡಿ ಹೋಗುತ್ತಿದ್ದಾಗ ಕಂಡು ಹಿಡಿಯಲು ಆಗುವುದಿಲ್ಲ ಎಂದರೆ ಸರಿ. ಆ ಹೊಲದಲ್ಲಿ ಗಾಂಜಾ ಗಿಡಗಳು ಎತ್ತರದಲ್ಲಿ ಇದ್ದವು. ಸಿಪಿಐ ಅವರು ಗಾಂಜಾ ಗಿಡಗಳನ್ನು ಗುರುತಿಸಿದರು. ಪೇದೆಗಳು ಗಾಂಜಾ ಗಿಡಗಳನ್ನು ಕಿತ್ತಿದ್ದರು. ಯಾರು ಯಾರು ಎಷ್ಟು ಗಿಡಗಳನ್ನು ಕಿತ್ತಿದರು ಎಂದು ಹೇಳಲು ಆಗುವುದಿಲ್ಲ. ನಮ್ಮನ್ನು ನೋಡಿ ಅಕ್ಕ ಪಕ್ಕದ ಹೊಲದವರು ಯಾರು ಬರಲಿಲ್ಲ. ನಾವು ಪಶ್ಚಿಮ ದಿಕ್ಕಿಗೆ ಇದ್ದೆವು. ಆರೋಪಿ ಪಶ್ಚಿಮ ದಿಕ್ಕಿಗೆ ಓಡಿ ಹೋದ. ಪಂಚನಾಮೆಯನ್ನು ಪೇದೆ ಶಿವಲಿಂಗಪ್ಪ ಬರೆದರು. ಆರೋಪಿಯನ್ನು ಯಾರು ಹಿಡಿಯಲು ಪ್ರಯತ್ನ ಪಡಲಿಲ್ಲ. ನಿ.ಪಿ.5 ಮತ್ತು 6 ಫೋಟೊಗಳಲ್ಲಿ ನಾನು ಕಾಣುತ್ತಿಲ್ಲ ಎಂದರೆ ಸರಿ.

4. ದಿಃ 24.09.2020 ರಂದು ಬೆಳಿಗ್ಗೆ 10-00 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ನನ್ನ ಜೊತೆ ಸಿಪಿಐ ಸಿ.ಇ.ಎನ್. ಯಾದಗಿರಿ ಅವರು ಮತ್ತು ಅವರ ಸಿಬ್ಬಂದಿಯವರು ಠಾಣೆಯಲ್ಲಿದ್ದಾಗ ನನಗೆ ಒಂದು ಮಾಹಿತಿ ಬಂದಿದ್ದು ಮುದ್ನೂರ (ಬಿ) ಗ್ರಾಮದಲ್ಲಿ ಶಂಕರಸಿಂಗ ಅವರ ಹೊಲದಲ್ಲಿ ಅನಧಿಕೃತವಾಗಿ ಗಾಂಜಾ ಬೆಳೆದಿದ್ದಾರೆ ಎಂದು ಮಾಹಿತಿ ಬಂದಿದ್ದು ಅದರಂತೆ ತಹಶೀಲ್ದಾರ ಹುಣಸಗಿ ಅವರಿಗೆ ಫೋನ್ ಮುಖಾಂತರ ಮಾಹಿತಿ ತಿಳಿಸಿ ದಾಳಿ ಮಾಡಲು ಠಾಣೆಗೆ ಬರುವಂತೆ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಾಗೆ ದಾಳಿ ಕಾಲಕ್ಕೆ ಪಂಚರು ಬೇಕೆಂದು ಮುದ್ನೂರ ಸರಕಾರಿ ಪ್ರೌಢ ಶಾಲೆಯ ಶಿಕ್ಷಕರಾದ ಗುರು ತಂದೆ ಸಂಗಪ್ಪ ಮತ್ತು ಅಬ್ದುಲ ಖಯುಮ ಅವರನ್ನು ಠಾಣೆಗೆ ಬರುವಂತೆ ನಮ್ಮ ಸಿಬ್ಬಂದಿಯವರಿಗೆ ಹೇಳಿ ಕಳುಹಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗಾಂಜಾ ತೂಕಮಾಡಲುವ ಬಗ್ಗೆ ಮಕ್ತುಮ ವಡಗೇರಾ ತುಕ ಯಂತ್ರ ಮಾಡುವವನ್ನು ಕರೆಸಿಕೊಂಡೆ ಫೋಟೊಗಳನ್ನು ತೆಗೆಯಲು ವಿಶ್ವನಾಥ ಫೋಟೊ ಗ್ರಾಫರ ಇವರನ್ನು ಕರೆಸಿಕೊಂಡರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೊಲ ಗುರುತಿಸಲು ಗ್ರಾಮ ಲೆಖಾಧಿಕಾರಿ ಶಿಲಾ ಹೂಗಾರ ಅವರನ್ನು ಕರೆಯಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಡಿವೈಎಸಪಿ ಸುರಪೂರ ಅವರ ಅನುಮತಿ ಪಡೆದು ಬೆಳಿಗ್ಗೆ 11-30 ಗಂಟೆಗೆ

ಠಾಣೆಯನ್ನು ಬಿಟ್ಟು ನಮ್ಮ ಇಲಾಖಾ ಜೀಪನಲ್ಲಿ ನಾನು ಮತ್ತು ಸಿಬ್ಬಂದಿಯವರು ಹಾಗೂ ತಹಶೀಲ್ದಾರ ಅವರ ಇಲಾಖಾ ಜೀಪನಲ್ಲಿ ತಹಶೀಲ್ದಾರ ಮತ್ತು ಉಬಯ ಪಂಚರು, ತೂಕ ಮಾಡುವವರು, ಫೋಟೊ ಗ್ರಾಫರ ಮತ್ತು ಗ್ರಾಮಲೆಖಾಧಿಕಾರಿಗಳು, ಮತ್ತು ಸಿ.ಇ.ಎನ್. ಇನ್ಸಪೇಕ್ಟರ ಮತ್ತು ಅವರ ಸಿಬ್ಬಂದಿಗಳು ಎಲ್ಲರೂ ಹೊರಟು ಮುದ್ನೂರ ಗ್ರಾಮಕ್ಕೆ ಮಧ್ಯಾಹ್ನ 12-30 ಗಂಟೆಗೆ ಮುದ್ನೂರ ಗ್ರಾಮದ ಸರ್ವೆ ನಂ. 176ಕ್ಕೆ ತಲುಪಿದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮನ್ನು ನೋಡಿ ಒಬ್ಬ ವ್ಯಕ್ತಿ ಓಡಿ ಹೋದ ನಾವು ಎಲ್ಲರೂ ಸೇರಿ ಆ ಹೊಲಕ್ಕೆ ಹೋಗಿ ಪರಿಶೀಲಿಸಿದಾಗ ಹತ್ತಿ ಹೊಲದಲ್ಲಿ ಅಲ್ಲಲ್ಲಿ ಕಾಣದ ಹಾಗೆ ಅನಧಿಕೃತವಾಗಿ ಗಾಂಜಾ ಗಿಡಗಳನ್ನು ಬೆಳೆದಿದ್ದು ಕಂಡು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಬಯ ಪಂಚರ ಸಮಕ್ಷಮ ಸಿಬ್ಬಂದಿಗಳ ಸಹಾಯದಿಂದ 3 ವರೆ ಅಡಿ ಇರುವ ಒಟ್ಟು 20 ಗಿಡಗಳು, ಮತ್ತು 2 ಅಡಿಯ 70 ಗಿಡಗಳನ್ನು ಕಿತ್ತಿ ಪರಿಶೀಲಿಸಿ ನೋಡಲಾಗಿ 20 ಗಿಡಗಳಲ್ಲಿ ಹೂ ಮತ್ತು ಕಾಯಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಪರಿಗೆ ಇದ್ದನ್ನು ತಿಳಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಗಿಡಗಳನ್ನು ತೂಕಮಾಡಲು ಬಂದಿದ್ದ ವ್ಯಕ್ತಿಯ ಸಹಾಯದಿಂದ ಅಲ್ಲೆ ತೂಕ ಮಾಡಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು 22 ಕೆ.ಜಿ. 400 ಗ್ರಾಮ ಇತ್ತು. ತೂಕ ಮಾಡುವ ಕಾಲಕ್ಕೆ ಫೋಟೊಗಳನ್ನು ತೆಗೆಸಿ ವಿಡಿಯೋ ಮಾಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 20 ಗಿಡಗಳನ್ನು ತಲಾ 5 ರಂತೆ 4 ಪೆಂಡಿಗಳನ್ನು ಮಾಡಿಸಿ, ಒಟ್ಟು 5 ಪೆಂಡಿಗಳನ್ನು ಮಾಡಿ ಒಂದೊಂದು ಪೆಂಡಿಯಿಂದ ಆರ್.ಎಫ್.ಎಸ್.ಎಲ್. ಸಲುವಾಗಿ 100 ಗ್ರಾಮನ್ನು ಹೂ ಕಾಯಿ ಇರುವಂತೆ ತೆಗೆದು ಸ್ಯಾಮಪಲ ಸಲುವಾಗಿ ಬಿಳಿ ಚೀಲದಲ್ಲಿ ಹಾಕಿ ಅರಗಿನಿಂದ ಸೀಲ್ ಮಾಡಿ ಪಂಚರ ಸಹಿ ಇರುವ ಚೀಟಿ ಅದಕ್ಕೆ ಅಂಟಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1-30 ರಿಂದ 3-30 ಗಂಟೆಯ ವರೆಗೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಮುದ್ದೆ ಮಾಲುಗಳನ್ನು ಮತ್ತು ಜಪ್ತಿ ಪಂಚನಾಮೆ ತೆಗೆದುಕೊಂಡು ಠಾಣೆಗೆ ಹೋಗಿ ಸಂಜೆ 4-00 ಗಂಟೆಗೆ ಠಾಣಾಧಿಕಾರಿಯವರಿಗೆ ವರದಿ ಜೊತೆಗೆ ಮುದ್ದೆ ಮಾಲುಗಳನ್ನು ಮತ್ತು ಜಪ್ತಿ ಪಂಚನಾಮೆ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಯಾದಗಿರಿ